# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.

## M.V.C.122/2018

ಸಾಕ್ಷಿಯನ್ನು ದಿಃ 29.10.2024 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

## ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ-

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ಸಂಗತಿಗಳೆಲ್ಲ ಸತ್ಯವಾಗಿದ್ದು ಸಹಿ ಮಾಡಿದ್ದೇನೆ.

ಈ ದಿನ ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು,

| | |
|---|---|
| ನಿಪಿ.110 | ಕೇಸ್ ಶೀಟ್ |
| ನಿಪಿ.111, 112 | **ಎರಡು** ಒಪಿ ರೆಕಾರ್ಡ್ ಗಳು |
| ನಿಪಿ.113 | 4 ಎಕ್ಸ್–ರೇ ಫಿಲ್ಮ್ ಗಳು **(ಒಟ್ಟಾಗಿ)** |

ಎಂದು ಗುರುತಿಸಲಾಯಿತು.

## ಪಾಟೀಸವಾಲುಃ 3 ನೇ ಎದುರುದಾರರ ಪರ ಶ್ರೀ ಸಿ.ವಿ.ಎಸ್ ಅವರಿಂದ-

1. ನನ್ನ ಸಾಕ್ಷಿ ಪ್ರಮಾಣ ಪತ್ರದ 3 ನೇ ಪ್ಯಾರಾದಲ್ಲಿ ಆತನನ್ನು ಕರ್ತವ್ಯದಲ್ಲಿದ್ದ ವೈದ್ಯರು ಎಂದು ತಿಳಿಸಿದ್ದು, ಆ ದಿನ ಆ ರೀತಿ ಕರ್ತವ್ಯದಲ್ಲಿದ್ದ ವೈದ್ಯರು ಯಾರು ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ನಾನು ಸದರಿ ದಿನದಂದು ಕರ್ತವ್ಯದಲ್ಲಿ ಇದ್ದೇನಾ ಎಂದರೆ ರಾತ್ರಿ ಬಂದಿದ್ದರು ನಾನು ರಾತ್ರಿ ಸಮಯ ಕರ್ತವ್ಯದಲ್ಲಿರಲಿಲ್ಲ.

2. ನಮ್ಮ ಆಸ್ಪತ್ರೆಯ ದಾಖಲೆಗಳಲ್ಲಿ ಅರ್ಜಿದಾರರು ಆಸ್ಪತ್ರೆಗೆ ಬಂದ ಸಮಯದಲ್ಲಿ ಯಾವ ವೈದ್ಯರು ಘಟಕದ ಮುಖ್ಯಸ್ಥರಾಗಿದ್ದರು ಎಂದು ನಮೂದು ಇರುತ್ತದೆ ಎಂದರೆ ಸರಿ. ಅರ್ಜಿದಾರರಿಗೆ ಸಂಬಂಧಪಟ್ಟಂತೆ ನಮ್ಮ ಆಸ್ಪತ್ರೆಯ ಕಡತದಲ್ಲಿ ಸರ್ಜನ್ ಆಗಿದ್ದ ನನ್ನ ಹೆಸರು ಇದೆ. OPD ಯಲ್ಲಿ ಬಂದ ರೋಗಿ / ಗಾಯಾಳುಗಳನ್ನು ಪರಿಶೀಲಿಸಿ ಅವರಿಗೆ ಯಾವ ರೀತಿಯ ನೋವಿದೆ ಎಂಬುದನ್ನು ದಾಖಲೆಗಳಲ್ಲಿ ನಮೂದಿಸಿರುತ್ತೇವೆ ಎಂದರೆ ಸರಿ.

3. ನಮ್ಮ ಆಸ್ಪತ್ರೆಯಿಂದ ಅರ್ಜಿದಾರರು ಚಿಕಿತ್ಸೆ ಪಡೆದು ಬಿಡುಗಡೆಯಾದ ನಂತರ ಪುನಃ ಎಷ್ಟು ಬಾರಿ ಫಾಲೋ ಅಪ್ ಗಾಗಿ ಬಂದಿದ್ದರು ಎಂದು ನಾನು ಇಂದು ಹಾಜರುಪಡಿಸಿರುವ ದಾಖಲೆಗಳಲ್ಲಿ ನಮೂದು ಇರುವುದಿಲ್ಲ, ಸುಮಾರು 8–10 ಬಾರಿ ಬಂದಿದ್ದರು. ನಿಪಿ.111 ರ OPD ಯಲ್ಲಿ ಅರ್ಜಿದಾರರು ದಿಃ 27.03.2024 ರಂದು ಬಂದಿದ್ದರು ಎಂದು ನಮೂದಾಗಿದೆ. ಸದರಿ ದಿನದಂದು ಅರ್ಜಿದಾರರಿಗೆ ಪರೀಕ್ಷೆ ಮಾಡಿದಾಗ ಅವರಿಗೆ ಭಾರ ಎತ್ತಲು ಕೈಯನ್ನು ಸರಾಗವಾಗಿ ಚಲಿಸಲು ತೊಂದರೆ ಇತ್ತು ಮತ್ತು ಅದರಲ್ಲಿ ಬಲ ಕಡಿಮೆ ಇತ್ತು , ಆ ಕಾರಣ ಎಕ್ಸ್ ರೇ ಮಾಡಿಸಿದಾಗ ಮೂಳೆಗಳು ಕೂಡಿದ್ದವು ಆದರೆ ಇಂಪ್ಲಾಂಟ್ಸ್ ಇನ್ನೂ ಹಾಗೇ ಇದ್ದವು.

4. ರೋಗಿಗೆ ಯಾವುದೇ ಚಿಕಿತ್ಸೆ ಕೊಟ್ಟರು ಆ ಬಗ್ಗೆ ಆಸ್ಪತ್ರೆಯಲ್ಲಿ ದಾಖಲೆ ನಿರ್ವಹಿಸುತ್ತೇವೆ ಎಂದರೆ ಸರಿ. ದಿಃ 28.03.2016 ರ ನಂತರದ ಲಭ್ಯ ಇರುವ ದಾಖಲೆ ಎಂದರೆ ದಿಃ 27.03.2024 ರ ದಾಖಲೆಯಾಗಿದ್ದು ಈ ಎರಡು ದಿನಾಂಕಗಳ ನಡುವಿನ ಚಿಕಿತ್ಸೆಯ ದಾಖಲೆಗಳು ನಾನು ಇಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಆ ಬಗ್ಗೆ ದಾಖಲೆಗಳು ಅರ್ಜಿದಾರರ ಬಳಿಯೇ ಲಭ್ಯ ಇರುತ್ತವೆ ಎಂದು ಸ್ವಯಂ ನುಡಿಯುತ್ತಾರೆ.

5. ನಿಪಿ111 ಹಾಗೂ 112 ರ ದಾಖಲೆಗಳನ್ನು ಮಾತ್ರ ನಾನು ಹಾಜರುಪಡಿಸಿದ್ದು, ಅದರ ಹಿಂದಿನ ದಾಖಲೆಗಳು ಅರ್ಜಿದಾರರಲ್ಲಿ ಇವೆ ಎಂದು ಏಕೆ ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ನ್ಯಾಯಾಲಯದಲ್ಲಿ ಅರ್ಜಿದಾರರ ನ್ಯೂನ್ಯತೆ ಬಗ್ಗೆ ಸಾಕ್ಷಿ ನುಡಿಯುವ ಸಲುವಾಗಿ ಹಾಜರುಪಡಿಸಬೇಕು ಎಂದು ಈ ಎರಡು ದಾಖಲೆಗಳನ್ನು ಅರ್ಜಿದಾರರಿಂದ ಪಡೆದು ತಂದಿದ್ದೇನೆ ಎನ್ನುತ್ತಾರೆ. ಈಗ ನನಗೆ ನ್ಯಾಯಾಲಯದ ಕಡತದಿಂದ ಅರ್ಜಿದಾರರು ಹಾಜರುಪಡಿಸಿರುವ ದಾಖಲೆಗಳನ್ನು ತೋರಿಸಿದ್ದು, ಸದರಿ ದಾಖಲೆಗಳ ಪೈಕಿ ನಮ್ಮ ಆಸ್ಪತ್ರೆಗೆ ಸಂಬಂಧಪಟ್ಟಂತೆ ನಿಪಿ.17 ರ ದಾಖಲೆ ಹೊರತುಪಡಿಸಿ ಬೇರೆ ಯಾವುದೇ ದಾಖಲೆ ಇರುವುದಿಲ್ಲ.

6. ನಿಪಿ.111 ರಲ್ಲಿ ಅರ್ಜಿದಾರರಿಗೆ ಇವೆ ಎಂದು ಕಾಣಿಸಿರುವ ಸಮಸ್ಯೆಗಳು ಮೊದಲಿನಿಂದಲೂ ಅಂದರೆ ಶಸ್ತ್ರಚಿಕಿತ್ಸೆ ಆದ ಸಮಯದಿಂದ ಹಿಡಿದು ಮುಂದುವರಿದು

ಬಂದ ತೊಂದರೆಗಳಾಗಿವೆ. ದಿಃ 09.03.2016 ಮತ್ತು ದಿಃ 23.03.2016 ರಂದು ಅರ್ಜಿದಾರರಿಗೆ ಶ್ರಸ್ತಚಿಕಿತ್ಸೆ ಆಗಿದೆ ಎಂದು ನಿಪಿ.110 ರಲ್ಲಿ ಕಾಣಿಸಲಾಗಿದೆ ಎಂದರೆ ಸರಿ. ನಿಪಿ.111 ರಲ್ಲಿ ಕಾಣಿಸಿರುವ ಸಮಸ್ಯೆಗಳು ನಿಪಿ.17 ರಲ್ಲಿ ಕಾಣಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ನಿಪಿ.17 ರಲ್ಲಿ ಸಮಸ್ಯೆಯನ್ನು ಕಾಣಿಸಿಲ್ಲ ಆದರೆ ಫಿಜಿಯೋಥೆರಪಿಗೆ ಸೂಚಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ.111 ರಲ್ಲಿ ಕಾಣಿಸಿರುವ ಸಮಸ್ಯೆಗಳನ್ನು ನಿಪಿ.17 ರಲ್ಲಿ ಕಾಣಿಸಿರುವುದಿಲ್ಲ ವಿವರಗಳನ್ನು ಬರೆಯಬೇಕಾಗಿರುವುದರಿಂದ ನಿಪಿ.17 ರಲ್ಲಿ ಕಾಣಿಸಿರುವುದಿಲ್ಲ. ನಿಪಿ.111 ರ ಸಮಸ್ಯೆಗಳನ್ನು ನಿಪಿ.17 ರಲ್ಲಿ ಏಕೆ ಕಾಣಿಸಿಲ್ಲ ಎಂದು ಕೇಳಿದಾಗ OPD ಯಲ್ಲಿ ಬ್ಯೂಸಿ ಇದ್ದ ಕಾರಣ ನಿಪಿ.17 ರಲ್ಲಿ ನಮೂದಿಸಿಲ್ಲ ಎಂದು ಅನಿಸುತ್ತಿದೆ. ನಾನು ಒಂದು ಜವಾಬ್ದಾರಿಯುತ ಹುದ್ದೆಯಲ್ಲಿ ಇದ್ದು ನನ್ನ ಕರ್ತವ್ಯವನ್ನು ಜವಾಬ್ದಾರಿಯುತವಾಗಿ ನಿರ್ವಹಿಸಬೇಕಾಗಿದ್ದು ಈಗ ನಾನು ಬ್ಯೂಸಿ ಇದ್ದ ಕಾರಣ ನಮೂದಿಸಿಲ್ಲ ಎಂದು ನೀಡಿದ ಉತ್ತರ ಸಮಂಜಸವಾಗಿಲ್ಲ ಎಂದರೆ ಸರಿಯಲ್ಲ.

7. ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ದಾಖಲಾತಿಗಳನ್ನು ಬಿಟ್ಟು, ಅರ್ಜಿದಾರರು ಬೇರೆ ವೈದ್ಯರಲ್ಲಿ ಪರೀಕ್ಷಿಸಿಕೊಂಡು ಆ ಬಗ್ಗೆ ಯಾವುದಾದರು ದಾಖಲೆಗಳು ಇಲ್ಲಿಯವರಗೆ ಅರ್ಜಿದಾರರು ಹಾಜರುಪಡಿಸಿರುವ ದಾಖಲೆಗಳಲ್ಲಿ ಇವೆಯೇ ಪರಿಶೀಲಿಸಿ ಹೇಳಿ ಎಂದಾಗ ಅಂತಹ ದಾಖಲೆಗಳು ಇಲ್ಲ ಎಂದು ನುಡಿಯುತ್ತಾರೆ. ನಿಪಿ.111 ರಲ್ಲಿ ಅರ್ಜಿದಾರರ ಬಲಗೈ ನ್ಯೂಮರಸ್ ಮತ್ತು ಅಲ್ನಾ ಮೂಳೆಗಳಲ್ಲಿ ಇಂಪ್ಲಾಂಟ್ಸ್ ಇವೆ ಎಂದು ಕಾಣಿಸಲಾಗಿದೆ. ಅರ್ಜಿದಾರರ ಕೈಗೆ ಎರಡು ಕಡೆ ಶ್ರಸ್ತಚಿಕಿತ್ಸೆ ಮಾಡಿ ಇಂಪ್ಲಾಂಟ್ಸ್ ಅಳವಡಿಸಲಾಗಿದೆ. ಸದರಿ ಇಂಪ್ಲಾಂಟ್ಸ್ ಇನ್ನೂ ಕೂಡ ಹೊರತೆಗೆದಿಲ್ಲ.

8. ನಿಪಿ.111 ರ ಹಿಂಭಾಗದ ಪುಟದಲ್ಲಿ ಮಂಡಿಗೆ ಸಂಬಂಧಪಟ್ಟಂತೆ ನೀಡಿದ ಸಲಹೆ ಪ್ರಸ್ತುತ ಪ್ರಕರಣದ ಅಪಘಾತಕ್ಕೆ ಸಂಬಂಧಪಟ್ಟಿರುವುದಿಲ್ಲ. ಅರ್ಜಿದಾರರಿಗೆ ಆಗಿದ್ದ ಮೂಳೆ ಮುರಿತ ಈಗ ಸಂಪೂರ್ಣ ಗುಣಮುಖವಾಗಿವೆ ಎಂದರೆ ಮೂಳೆಗಳು ಕೂಡಿವೆ. ನಿಪಿ.113 ರಲ್ಲಿರುವ ದಿಃ 27.03.2024 ರ ಎಕ್ಸ್ ರೇ ನಂತರ ದಿಃ 23.10.2024 ರಂದು ಅರ್ಜಿದಾರರನ್ನು ಪರಿಕ್ಷೀಸಿ ಪುನಃ ಎಕ್ಸ್ ರೇ ಗೆ ಸಲಹೆ

ನೀಡಿರುವುದಿಲ್ಲ. ಅರ್ಜಿದಾರರ ವಯಸ್ಸಿನಲ್ಲಿ ಆದಂತಹ ಮೂಳೆ ಮುರಿತ ಹಾಲಿ ಚಿಕಿತ್ಸೆ ನಂತರ ಸಂಪೂರ್ಣ ಗುಣಮುಖವಾಗಿವೆ ಎಂದರೆ ಸಾಕ್ಷಿ ಪುನಃ ಮೂಳೆಗಳು ಕೂಡಿವೆ ಎಂದು ನುಡಿಯುತ್ತಾರೆ.

9. ಅರ್ಜಿದಾರರ ಬಲಗೈ ಸ್ವಲ್ಪ ಮಟ್ಟಿಗೆ ಶ್ರಿಂಕ್ ಆಗಿದೆ ಎಂದು ಹೇಳಿದ್ದು ಅಪಘಾತದಲ್ಲಿ ಯಾವ ಮಟ್ಟದಲ್ಲಿತ್ತು ಮತ್ತು ಅದು ಈಗ ಯಾವ ಮಟ್ಟದಲ್ಲಿದೆ ಎಂದು ಯಾವ ಆಧಾರದ ಮೇಲೆ ನುಡಿಯುತ್ತಿದ್ದೇನೆ ಎಂದರೆ ಅವರ ಇನ್ನೊಂದು ಕೈ ಅಳತೆ ಮಾಡಿ ಅದರ ಆಧಾರದ ಮೇಲೆ ನಾನು ನುಡಿಯುತ್ತಿದ್ದೇನೆ. ಆದರೆ ದಾಖಲೆಗಳಲ್ಲಿ ಅರ್ಜಿದಾರರ ಎಡಗೈ ಅಳತೆ ಎಷ್ಟಿದೆ ಎಂದು ನಮೂದು ಮಾಡಿರುವುದಿಲ್ಲ. ಬಲಗೈ ಶ್ರಿಂಕ್ ಆಗಿದೆ ಎಂದು ಹೇಳಬೇಕಾಗದರೆ ಎಡಗೈ ಅಳತೆ ಎಷ್ಟಿದೆ ಎಂದು ನಾನು ತೋರಿಸಬೇಕು ಎಂದರೆ OPD ಸ್ಲಿಪ್ ನಲ್ಲಿ ಇದೆ ಎನ್ನುತ್ತಾರೆ. ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಈ ಅಂಶ ಇಲ್ಲ ಎಂದರೆ ಸರಿ.

10. ಮೆಡಿಕಲ್ ಮ್ಯಾನ್ಯುವಲ್ ಪ್ರಕಾರ ಯಾವುದಾದರೂ ಅಂಗ ಶ್ರಿಂಕ್ ಆಗಿದೆ ಎಂದು ಹೇಳಬೇಕಾದರೆ ಸದರಿ ಅಂಗವನ್ನು ಯಾವ ಅಂಗದೊಂದಿಗೆ ಹೋಲಿಕೆ ಮಾಡಿ ಸದರಿ ಅಭಿಪ್ರಾಯ ನೀಡಲಾಗಿದೆ ಎಂದು ಕಾಣಿಸಬೇಕು ಎಂಬುದು ನಿಯಮ ಎಂದರೆ ಅದರ ವಿಚಾರ ನನಗೆ ಗೊತ್ತಿಲ್ಲ.

11. ಅರ್ಜಿದಾರರ ಬಲಗೈಗೆ ಕಾಣಿಸಿರುವ ನ್ಯೂನ್ಯತಾ ಪ್ರಮಾಣ ಶೇ. 25 ಇದ್ದು ಸಂಪೂರ್ಣ ದೇಹಕ್ಕೆ ಎಷ್ಟು ನ್ಯೂನ್ಯತೆ ಬರುತ್ತದೆ ಎಂದು ಗೈಡ್ ಲೈನ್ಸ್ ನಲ್ಲಿ ಇರುವುದಿಲ್ಲ. ನಿರ್ದಿಷ್ಟ ಅಂಗಕ್ಕೆ ಕಾಣಿಸಿರುವ ನ್ಯೂನ್ಯತೆಯು ಸಂಪೂರ್ಣ ದೇಹಕ್ಕೆ ಎಷ್ಟು ಪ್ರಮಾಣದಲ್ಲಿ ತೊಂದರೆ ಉಂಟುಮಾಡುತ್ತದೆ ಎಂಬ ಬಗ್ಗೆ ಮಾರ್ಗದರ್ಶಿ ಸೂತ್ರಗಳಲ್ಲಿ ಇರುವುದಿಲ್ಲ. ನಿರ್ದಿಷ್ಟ ಅಂಗದ ನ್ಯೂನ್ಯತೆ ಕಾಣಿಸಿದಾಗ ಸಂಪೂರ್ಣ ದೈಹಿಕ ನ್ಯೂನ್ಯತೆ ಕೂಡಾ ಕಾಣಿಸುವ ಕರ್ತವ್ಯ ನಮ್ಮದಾಗಿರುತ್ತದೆ ಎಂದರೆ ಸರಿಯಲ್ಲ.

12. ಅರ್ಜಿದಾರರನ್ನು ನಾನು ಸುಮಾರು 8-10 ಬಾರಿ ಪರೀಕ್ಷಿಸಿದ್ದೇನೆ ಎಂದು ನುಡಿದಿದ್ದು ನಿಪಿ.111 ಮತ್ತು 112 ರ ದಾಖಲೆಗಳಲ್ಲಿ ನಮೂದಿಸಿರುವ ನ್ಯೂನ್ಯತೆಗಳನ್ನು

ಹೊರತುಪಡಿಸಿ ಬೇರೆ ಯಾವ ದಾಖಲೆಗಳಲ್ಲಿಯು ಸದರಿ ನ್ಯೂನ್ಯತೆಗಳನ್ನು ಕಾಣಿಸಿಲ್ಲ ಎಂದರೆ ಸರಿ. ಅರ್ಜಿದಾರರಿಗೆ ಭಾರ ಎತ್ತಲು ಮತ್ತು ಬರವಣಿಗೆ ಮಾಡಲು ತೊಂದರೆ ಇದೆ ಎಂದು ತಿಳಿಸಿದ್ದು, ಅದನ್ನು ಕಂಡುಹಿಡಿಯಲು ಯಾವ ರೀತಿಯ ಪ್ರಾಯೋಗಿಕ ಪರೀಕ್ಷೆ ಮಾಡಿದ್ದೇನೆ ಎಂದು ದಾಖಲೆಗಳಲ್ಲಿ ನಮೂದಿಸಿಲ್ಲ. ನಾನು ಅರ್ಜಿದಾರರ ನ್ಯೂನ್ಯತೆ ಅಥವಾ ತೊಂದರೆಗಳನ್ನು ಕಂಡುಹಿಡಿಯಲು ಯಾವ ರೀತಿಯ ಪ್ರಾಯೋಗಿಕ ಪರೀಕ್ಷೆ ಮಾಡಿದ್ದೇನೆ ಎಂದು ದಾಖಲೆಗಳಲ್ಲಿ ನಮೂದಿಸಲು ನನಗೇನೂ ತೊಂದರೆ ಇರಲಿಲ್ಲ.

13. ಅರ್ಜಿದಾರರಿಗೆ ಶಾಶ್ವತ ಅಂಗನ್ಯೂನ್ಯತೆ ಉಂಟುಮಾಡುವ ಯಾವುದೇ ಗಾಯಗಳು ಆಗಿರಲಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಯಾವುದೇ ಶಾಶ್ವತ ಅಂಗನ್ಯೂನ್ಯತೆ ಉಂಟುಮಾಡುವ ಗಾಯಗಳು ಆಗದೆ ಇದ್ದರು ನಾನು ಅವರಿಗೆ ಅನೂಕೂಲ ಮಾಡಿಕೊಡುವ ಉದ್ದೇಶದಿಂದ ನ್ಯಾಯಾಲಯಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 27.03.2024 ರಂದು ಎಕ್ಸ್ ರೇ ತೆಗೆಸಿ ತೊಂದರೆಗಳನ್ನು ನಮೂದಿಸಿರುವಂತಹ ರೀತಿಯ ದಿಃ 23.10.2024 ರಂದು ಕೂಡ ಎಕ್ಸ್ ರೇ ತೆಗೆಸಿ ನಾನು ಅರ್ಜಿದಾರರಿಗೆ ಇರುವಂತಹ ತೊಂದರೆಗಳನ್ನು ತಿಳಿಸಿದ್ದರೆ ಅದಕ್ಕೆ ಮೌಲ್ಯ ಇರುತ್ತಿತ್ತು ಎಂದರೆ ಸರಿಯಲ್ಲ. ನಾನು ತಿಳಿಸಿರುವಂತಹ ತೊಂದರೆಗಳು ಅರ್ಜಿದಾರರಿಗೆ ಇರದೆ ಇದ್ದರೂ ನಾನು ಅವರಿಗೆ ಚಿಕಿತ್ಸೆ ಕೊಟ್ಟಿದ್ದೇನೆ ಎಂಬ ಒಂದೇ ಒಂದು ಉದ್ದೇಶಕ್ಕಾಗಿ ಹೆಚ್ಚಿನ ಪ್ರಮಾಣದಲ್ಲಿ ಮತ್ತು ಉತ್ಪ್ರೇಕ್ಷೆಯಿಂದ ಕೂಡಿದ ನ್ಯೂನ್ಯತೆ ತೋರಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನೀಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.